ಕಾಲಿಂಗ್ ಲೆಟೆನ್‌ಷನ್, ಅರ್ಧಗಂಟೆಯ ಕಾಲಾವಕಾಶ ಚರ್ಚೆ, ಇದರಲ್ಲಿ ನೀವು ಈ ರೀತಿಯಾಗಿ ಮಾಡಿದರೆ ಹೇಗೆ?

ಅಧ್ಯಕ್ಷರು: ಮಾನ್ಯ ಸಚಿವರು ವಿಚಾರ ಮಾಡುತ್ತೇನೆಂದು ಹೇಳಿದ ಮೇಲೆಯೂ ಕೂಡ ನೀವು ಅದನ್ನೇ ಪರ್ಸೂ ಮಾಡುತ್ತಿದ್ದರೆ ಹೇಗೆ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ: ತಾವು ಹೇಳತಕ್ಕಂಥ ವಿಚಾರದ ಬಗ್ಗೆ ನಾನು ಗಮನದಲ್ಲಿಟ್ಟುಕೊಂಡು ವಿಚಾರಣೆ ಮಾಡುತ್ತೇನೆ, ತಕ್ಷಣ ನಾವು ಏನು ಕ್ರಮ ಕೈಗೊಳ್ಳಬೇಕು ಅದನ್ನು ತೆಗೆದುಕೊಳ್ಳುತ್ತೇವೆ, ಬೇಗನೆ ಮಾಡುತ್ತೇನೆ.

ಅಧ್ಯಕ್ಷರು: ಅದಷ್ಟು ಬೇಗನೆ ಮಾಡಿ.

ಶ್ರೀ ಜಗದೀಶ್ ಶೆಟ್ಟರ್: ಇದರ ಬಗ್ಗೆ ದಯವಿಟ್ಟು ಸದನಕ್ಕೆ ಉತ್ತರವನ್ನು ಕೊಡಿ.

ಅಧ್ಯಕ್ಷರು: ಆಯಿತು.

4. ಗಮನ ಸೆಳೆಯುವ ಸೂಚನೆ:

ವಿಷಯ: ದಾಸರಹಳ್ಳಿ ನಗರಸಭೆ ವ್ಯಾಪ್ತಿಯ ವಿಧಾನಸೌಧ ಬಡಾವಣೆಯ ನಿವಾಸಿಗಳಿಗೆ ತೀವ್ರ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ

ಶ್ರೀ ರುದ್ರಪ್ಪ ಎಂ. ಲಮಾಣಿ (ಬ್ಯಾಡಗಿ): ಮಾನ್ಯ ಅಧ್ಯಕ್ಷರೆ, ದಾಸರಹಳ್ಳಿ ನಗರಸಭೆ ವ್ಯಾಪ್ತಿಯ ವಿಧನಸೌಧ, ಬಡಾವಣೆಯ ನಿವಾಸಿಗಳಿಗೆ ತೀವ್ರ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಮಾನ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

+ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು): ದಾಸರಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ ಬರುವ ವಾರ್ಡ್ ಸಂಖ್ಯೆ 26ರಲ್ಲಿರುವ ವಿಧಾನಸೌಧ ಬಡಾವಣೆಯ ನಿವಾಸಿಗಳು ತೀವ್ರ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುತ್ತಿರುವ ಬಗ್ಗೆ ಹಾಗೂ ಸದರಿ ಬಡಾವಣೆಗೆ ಕನಿಷ್ಟಪಕ್ಷ 3 ದಿನಕ್ಕೊಮ್ಮೆಯಾದರೂ ನೀರನ್ನು ಪೂರೈಸುವ ಬಗ್ಗೆ:-

ದಾಸರಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ತೀವ್ರ ಅಭಾವ ಇರುತ್ತದೆ. ಅದರಂತೆ, ವಾರ್ಡ್ ನಂ.26ರಲ್ಲಿ ಬರುವ ವಿಧಾನಸೌಧ ಬಡಾವಣೆಯ ನಿವಾಸಿಗಳಿಗೂ ಸಹ ತೀವ್ರ ಕುಡಿಯುವ ನೀರಿನ ಸಮಸ್ಯೆ ಇದೆ. ಮಳೆ ಕೊರತೆಯಿಂದ ನೀರಿನ ಅಂತರ್ಜಲದ ಮಟ್ಟ ತೀರಾ ಕುಸಿದಿದ್ದು ಈಗಾಗಲೇ ಕೆಲವು ಬೋರ್‌ವೆಲ್‌ಗಳಲ್ಲಿ ನೀರು ಬತ್ತಿ ಹೋಗಿರುತ್ತದೆ. ವಿಧಾನಸೌಧ ಬಡಾವಣೆಗೆ ಹಾಲಿಯಿರುವ ಎರಡು ಕೊಳವೆ ಬಾವಿಗಳಿಂದ ದೊರಕುತ್ತಿರುವ ನೀರಿನಿಂದ ಸುಮಾರು ಹತ್ತು ದಿನಗಳಿಗೊಮ್ಮೆ ನೀರು ಸರಬರಾಜು ಮಾಡಲಾಗುತ್ತಿದೆ. ಸಾಧ್ಯವಾದಷ್ಟು ಮಟ್ಟಿಗೆ ಟ್ಯಾಂಕರ್ ಮುಖಾಂತರ ಸಹ ನೀರು ಪೂರೈಸಲಾಗುತ್ತಿದೆ. ಇತ್ತೀಚೆಗೆ ಮಾನ್ಯ ಲೋಕಸಭಾ ಸದಸ್ಯರ ನಿಧಿಯಿಂದ ಒಂದು ಬೋರ್‌ವೆಲ್ ಕೊರೆದಿದ್ದು, ಇದಕ್ಕೆ ನಗರಸಭೆ ವತಿಯಿಂದ ಪಂಪ್ ಮತ್ತು ಮೋಟರ್ ಅಳವಡಿಸಲಾಗಿದೆ. ಬರ ಪರಿಹಾರ ನಿಧಿಯಿಂದ ಹಾಲಿಯಿರುವ ಒಂದು ಕೊಳವೆ ಬಾವಿಯ ಆಳವನ್ನು ಹೆಚ್ಚಿಸಲಾಗಿದೆ. ಆದರೆ ನೀರು ಸಮರ್ಪಕವಾಗಿ ಸಿಕ್ಕಿರುವುದಿಲ್ಲ, ನೀರಿನ ಅಭಾವವನ್ನು ಮನಗಂಡು ವಾರ್ಡ್ ನಂ.26 ವಿಧಾನಸೌಧ ಬಡಾವಣೆಗೆ ನಗರಸಭಾ

ನಿಧಿಯಿಂದ ಎರಡು ಹೊಸ ಬೋರ್‌ವೆಲ್‌ಗಳನ್ನು ಕೊರೆದು ವಿದ್ಯುತ್ ಚಾಲಿತ ಯಂತ್ರಗಳನ್ನು ಅಳವಡಿಸುವ ಬಗ್ಗೆ ನಗರಸಭೆಯಿಂದ ದಿನಾಂಕ 11.3.2003ರಂದು ಟೆಂಡರ್ ಕರೆಯಲಾಗಿದೆ. ಸದರಿ ಕೆಲಸವನ್ನು ಒಂದು ತಿಂಗಳೊಳಗಾಗಿ ಕಾರ್ಯಗತಗೊಳಿಸಲಾಗುವುದು. ಸಮರ್ಪಕ ನೀರು ದೊರೆತಲ್ಲಿ ಕನಿಷ್ಟ ಮೂರು ದಿನಗಳಿಗೊಮ್ಮೆ ನೀರು ಸರಬರಾಜು ಮಾಡಲು ವ್ಯವಸ್ಥೆ ಮಾಡಲಾಗುವುದು ಹಾಗೂ ಟ್ಯಾಂಕರ್ ಮೂಲಕ ಸಹ ನೀರು ಸರಬರಾಜು ಮಾಡುವ ಬಗ್ಗೆ ವ್ಯವಸ್ಥೆ ಮಾಡಲಾಗುವುದು.

ಮಾನ್ಯ ಅಧ್ಯಕ್ಷರೆ, ನಮ್ಮ ಸರ್ಕಾರ ಈ ಎಲ್ಲಾ 7 ಸಿಎಂಸಿ ಹಾಗೂ ಒಂದು ಟಿಎಂಸಿ ಏನಿದೆ, ಇದಕ್ಕೆಲ್ಲಾ ಕಾವೇರಿ ನೀರನ್ನು ಒದಗಿಸಿ ಕೊಡಬೇಕೆಂದು ಹೇಳಿ ಕಾರ್ಯಕ್ರಮವನ್ನು ನಾವು ರೂಪಿಸಿದ್ದೇವೆ ಈಗಾಗಲೇ ದಾಸರಹಳ್ಳಿ ನಗರಸಭೆಗೆ 47 ಲಕ್ಷ ರೂ.ಗಳ ಯೋಜನೆಯ ಒಂದು ವೆಚ್ಚವನ್ನು ಈ ಒಂದು ವರ್ಷಕ್ಕೆ ಅವರು ಕಳುಹಿಸಿಕೊಟ್ಟಿದ್ದಾರೆ, ಅದಕ್ಕೆ ಸರ್ಕಾರ ವ್ಯವಸ್ಥೆಯನ್ನು ಮಾಡುತ್ತದೆ. ಅದರಿಂದ ಒಟ್ಟಾರೆ 20 ವಾರ್ಡ್‌ಗಳಿಗೆ ಸಮರ್ಪಕವಾಗಿ ನೀರು ಕೊಡಬಹುದು ಎನ್ನುವುದರ ಬಗ್ಗೆ ಅವರ ಒಂದು ಆಲೋಚನೆ ಇದೆ. ಈ ಮಧ್ಯೆದಲ್ಲಿ ಏನಾಗಿದೆ ಎಂದರೆ, ಬಿಡಬ್ಲ್ಯೂ ಎಸ್‌ಎಸ್‌ಬಿ ಯಿಂದ ಕಾವೇರಿ ನೀರನ್ನು ಕೊಡಬೇಕೆಂದು ಎಲ್ಲಾ ಸಿಎಂಸಿ ಗಳ ಬೇಡಿಕೆ ಇದ್ದು, ಜನರ ಬೇಡಿಕೆ ಕೂಡ ಇದ್ದು, ಅವರ ಎಲ್ಲಾ ಒಟ್ಟಾರೆ ಸೇರಿ 550 ಕೋಟಿ ರೂ.ಗಳ ಒಂದು ವೆಚ್ಚದ ಬಿಡಬ್ಲ್ಯೂ ಎಸ್‌ಎಸ್‌ಬಿ ನವರು ಹಾಗೂ ನಮ್ಮ ಲೋಕಲ್ ಬಾಡಿಯವರು ಒಂದು ಯೋಜನೆಯನ್ನು ತಯಾರು ಮಾಡಿದ್ದಾರೆ. ನಾವು ಈಗಾಗಲೇ ಈ 8 ಸಿಎಂಸಿ ಗಳಿಗೆ ಪ್ರತಿಯೊಬ್ಬ ನಾಗರೀಕನ ಮನೆಗೆ ಯಾರು ನೀರನ್ನು ಕೇಳುತ್ತಾರೆ ಅವರಿಂದ 8500 ರೂ.ಗಳ ಡೆಪಾಸಿಟ್ ಕಲೆಕ್ಟ್ ಮಾಡಿಕೊಂಡು ಅದನ್ನು ಬಿಡಬ್ಲ್ಯೂಎಸ್‌ಎಸ್‌ಬಿ ಗೆ ಕಟ್ಟುವಂತೆ ನಾವೂ ಎಲ್ಲಾ ಸಿಎಂಸಿ ಗಳಿಗೆ ಆದೇಶವನ್ನು ಕಳುಹಿಸಿ ಕೊಟ್ಟಿದ್ದೇವೆ. ಈ ಪ್ರಸ್ತಾವನೆ ಕೂಡ ಆದಷ್ಟು ಬೇಗ ಕ್ಯಾಬಿನೆಟ್‌ಗೆ ಬರುತ್ತಿದೆ. ಬಿಡಬ್ಲ್ಯೂಎಸ್‌ಎಸ್‌ಬಿ ಯರು ಎಲ್ಲಾ ಸಿದ್ಧವಾಗಿ ಟೆಂಡರ್‌ನ್ನು ಕರೆದು ಒಂದೂವರೆ ವರ್ಷದಲ್ಲಿ ಕೆಲಸವನ್ನು ತೆಗೆದುಕೊಂಡು ಮುಗಿಸಬೇಕೆಂದು ಈ ಸರ್ಕಾರ ಯೋಜನೆಯನ್ನು ಹಾಕಿಕೊಂಡಿದೆ. ಬೆಂಗಳೂರು ನಗರದಲ್ಲಿ ನೀರನ್ನು ನಾವು ಯಾವರೀತಿಯಾಗಿ ಕೊಡುತ್ತಿದ್ದೇವೆ ಅದೇ ರೀತಿ 7 ಸಿಎಂಸಿ ಗಳಿಗೂ ಕೂಡ ಈ ಕಾವೇರಿ ನೀರನ್ನು ಕೊಡಬೇಕೆಂದು ಸರ್ಕಾರ ತೀವ್ರವಾದ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಶ್ರೀ ರುದ್ರಪ್ಪ ಎಂ. ಲಮಾಣಿ: ಟ್ಯಾಂಕರ್ ಮುಖಾಂತರ ನೀರನ್ನು ಒದಗಿಸುವ ಕೆಲಸವಾಗಬೇಕು. ಅಲ್ಲಿ 20-25 ದಿವಸಕ್ಕೆ ಒಂದು ಸಲ ನೀರನ್ನು ಬಿಡುತ್ತಿದ್ದಾರೆ.

ಶ್ರೀ ಡಿ.ಕೆ. ಶಿವಕುಮಾರ್: ಟ್ಯಾಂಕರ್ ಮೂಲಕ ನಾವು ಈಗಾಗಲೇ ನೀರನ್ನು ಕೆಲವು ಕಡೆ ಒದಗಿಸಿಕೊಡುತ್ತಿದ್ದೇವೆ. 47 ಲಕ್ಷ ರೂ.ಗಳಿಗೆ ದಾಸರಹಳ್ಳಿ ಸಿಎಂಸಿ ಯವರು ಒಂದು ಯೋಜನೆಯನ್ನು ಕೊಟ್ಟಿದ್ದಾರೆ, ಅದರಲ್ಲಿ ಈ ವ್ಯವಸ್ಥೆ ಕೂಡ ಸೇರಿಕೊಂಡಿದೆ. ಆದಷ್ಟು ಬೇಗ ಈ ಕೆಲಸವನ್ನು ನಾವು ಮಾಡುತ್ತೇವೆ.

ಶ್ರೀ ಆರ್. ಅಶೋಕ್: ಮಾನ್ಯ ಅಧ್ಯಕ್ಷರೆ, ಅದು ನನ್ನ ಕ್ಷೇತ್ರದಲ್ಲಿ ಬರುತ್ತದೆ ಟ್ಯಾಂಕರ್ ಮೂಲಕ ಏನು ನೀರು ಸರಬರಾಜು ಮಾಡುತ್ತಿದ್ದಾರೆಂದು ಮಾನ್ಯ ಸಚಿವರು ಏನು ಹೇಳಿದರು

ಆದು ಸತ್ಯಕ್ಕೆ ದೂರವಾದ ಮಾತು. ಆ ರೀತಿಯಾದ ಸಪ್ಲೈ ಇಲ್ಲ. ಅವರಿಗೆ 25 ಲಕ್ಷ ರೂ.ಗಳ ಹಣ ಬಾಕಿ ಕೊಡಬೇಕಾಗಿದೆ. ಆದಕ್ಕಾಗಿ ಯಾರು ಸಪ್ಲೈ ಮಾಡುವುದಕ್ಕೆ ತಯಾರಿಲ್ಲ. ಅಲ್ಲಿ ನೀರಿನ ಮಟ್ಟ ಬಹಳ ಕುಸಿದಿರುವುದರಿಂದ, ಈಗಾಗಲೇ ಆ ನಗರಸಭೆಯಲ್ಲಿ ಪೂರ್ತಿಯಾಗಿ ಹಣ ಖರ್ಚಾಗಿ ಹೋಗಿದೆ. ಅಲ್ಲಿ ಒಂದು ಪೈಸೆ ಹಣವಿಲ್ಲ. ವಿಜಯಾಬ್ಯಾಂಕಿನ್‌ಲ್ಲಿರುವ ಅಕೌಂಟ್‌ನ್ನು ಇನ್‌ಕಂಟ್ಯಾಕ್ಸ್‌ನವರು ಸೀಜ್ ಮಾಡಿಬಿಟ್ಟಿದ್ದಾರೆ. ಅವರಿಗೆ ಸುಮಾರು 34 ಲಕ್ಷ ರೂ.ಗಳ ಹಣವನ್ನು ಕಟ್ಟಬೇಕಾಗಿತ್ತು ಅವರು ಕಟ್ಟಿಲ್ಲ, ಅದಕ್ಕಾಗಿ ಅಕೌಂಟ್‌ನ್ನು ಸೀಜ್ ಮಾಡಿದ್ದಾರೆ. ಸೇಲ್ಸ್‌ಟ್ಯಾಕ್ಸ್ ನವರಿಗೆ 1 ಕೋಟಿ 29 ಲಕ್ಷ ರೂ.ಗಳನ್ನು ಕಟ್ಟಬೇಕು ಅವರೂ ಕೂಡ ಅಕೌಂಟ್‌ನ್ನು ರನ್ ಮಾಡುವುದಕ್ಕೆ ಬಿಡುತ್ತಿಲ್ಲ. ಅಂದರೆ 2 ಕೋಟಿ 50 ಲಕ್ಷ ರೂ.ಗಳ ಕಾಮಗಾರಿಗಳ ಬ್ಯಾಲೆನ್ಸ್ ಇದೆ. ಕಳೆದ ಒಂದು ವರ್ಷದಿಂದ ಸ್ಟಾಂಪ್ ಡ್ಯೂಟಿ ಹಣ ಹೋಗುತ್ತಿಲ್ಲ. ಸರ್ಕಾರದಿಂದ 8 ಕೋಟಿ ರೂ.ಗಳನ್ನು ಕೊಡಬೇಕಾಗಿದೆ, ಅದನ್ನು ಕೊಟ್ಟಿಲ್ಲ. ಯಾರೋ ಅಧಿಕಾರಿಗಳು ಮಾಡಿದ ತಪ್ಪಿಗೆ ಇವತ್ತು ಜನ ಶಿಕ್ಷೆಯನ್ನು ಅನುಭವಿಸುತ್ತಿದ್ದಾರೆ. ಕುಡಿಯುವ ನೀರಿನ್ನು 15 ದಿವಸಕ್ಕೆ ಒಂದು ಸಲಬಿಡುವುದಕ್ಕೆ ಪರಿಸ್ಥಿತಿ ಪೂರ್ತಿಯಾಗಿ ಹದಗೆಟ್ಟಿರುತ್ತದೆ.

1.00 ಪಿ.ಎಂ

ನನಗೆ ಗೊತ್ತಿರುವ ಪ್ರಕಾರ ಹದಿನೈದು ದಿವಸಗಳಿಗೊಮ್ಮೆ ಸ್ನಾನ ಮಾಡಲು ಅಲ್ಲಿನ ಜನ ನೆಲಮಂಗಲ, ಮಾಗಡಿ ತಾಲೂಕಿನ ಅವರ ನೆಂಟರ ಮನೆಗೆ ಹೋಗುತ್ತಾರೆ. 15 ದಿನಗಳಿಗೊಮ್ಮೆ ನೀರನ್ನು ಸಂಗ್ರಹಿಸಿ ಕುಡಿದರೆ ಅವರ ಸ್ಥಿತಿ ಏನಾಗಬೇಕು? ಹೆಗ್ಗನಹಳ್ಳಿ ಮತ್ತು ಲಗ್ಗೆರೆ, ಈ ಭಾಗಗಳಲ್ಲಿ ಬಹಳ ತೊಂದರೆ ಇದೆ. 10000 ಜನ ಮೆರವಣಿಗೆ, ಪ್ರತಿಭಟನೆ ಮಾಡಿ ಇಡೀ ದಿನ ನಗರಸಭೆಯ ಮುಂದೆ ಧರಣಿ ಮಾಡಿದ್ದಾರೆ. ಮಾನ್ಯ ನಗರಾಭಿವೃದ್ಧಿ ಸಚಿವರು 5 ಬಲ್ಕ್ ನೀರಿನ ವ್ಯವಸ್ಥೆಯನ್ನು ಮಾಡಿದ್ದಾರೆ. ಆದರೂ ಸಹ ಪ್ರಯೋಜನವಾಗಿಲ್ಲ. ನಿಧಾನಗತಿಯಲ್ಲಿ ಆಗುತ್ತಿದೆ, ಬೇಸಿಗೆ, ಬರಗಾಲದಿಂದಾಗಿ ಪರಿಸ್ಥಿತಿ ಹಾಗೇ ಇದೆ.

(ಗೊಂದಲ)

ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು: ಬೆಂಗಳೂರು ನಗರದ ಸಮಸ್ಯೆಗಳ ಬಗ್ಗೆ ಮಾತನಾಡಲಿಕ್ಕೆ ಅವಕಾಶ ಕೊಡದಿದ್ದರೆ ಹೇಗೆ?

ಅಧ್ಯಕ್ಷರು: ವಿಧಾನಸೌಧ ಬಡಾವಣೆಯ ಬಗ್ಗೆ, ನೀರಿನ ಬಗ್ಗೆ ಕೇಳಿ, ಬೆಂಗಳೂರು ನಗರದ ಬಗ್ಗೆ 12 ಜನ ಸದಸ್ಯರು ಮಾತನಾಡಲು ಸಿದ್ಧರಿರುತ್ತಾರೆ.

ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು: ಮಾನ್ಯ ನಗರಾಭಿವೃದ್ಧಿ ಸಚಿವರು ಮೊನ್ನೆ ಹೇಳಿದರು, ಬೆಂಗಳೂರಿನ ಸುತ್ತಮುತ್ತಲ ಹಾಗೂ ಬೆಂಗಳೂರು ನಗರದ ಸದಸ್ಯರುಗಳನ್ನು ಕರೆಸಿ ಇಲ್ಲಿರುವ ಸಮಸ್ಯೆಗಳನ್ನು ಪೂರ್ತಿ ಚರ್ಚೆ ಮಾಡುತ್ತೇನೆಂದು ಅದರ ಬಗ್ಗೆ ಏನು ಗಮನ ಕೊಟ್ಟಿದ್ದಾರೆ, ಈ ಬಗ್ಗೆ ಸಭೆ ಕರೆಯುತ್ತಾರೆಯೇ ಇಲ್ಲವೇ ಎಂಬುದನ್ನು ತಿಳಿಸಬೇಕು.

ಅಧ್ಯಕ್ಷರು: ಶ್ರೀ ಶಿವಕುಮಾರ್, ಬೇಗನೆ ಸಭೆ ಕರೆದು ಮಾತನಾಡಿ.

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು): ಶ್ರೀ ಕಟ್ಟಾಸುಬ್ರಮಣ್ಯನಾಯ್ಡು ಅವರು 24 ಗಂಟೆಗಳ ಕಾಲ ನನಗೆ ಸಿಗುತ್ತಿರುತ್ತಾರೆ, ಇಲ್ಲಿ ಮಾತ್ರ ಪ್ರಶ್ನೆಯನ್ನು ಕೇಳಬೇಕು

ಎನ್ನುವ ಅವಶ್ಯಕತೆ ಇಲ್ಲ, ಬೇರೆ ಸಮಯದಲ್ಲಿ ಕುಳಿತು ಆಳವಾಗಿ ಚರ್ಚೆ ಮಾಡೋಣ, ನಮ್ಮ ನಿಮ್ಮ ಬೇರೆ ಬೇರೆ ವಿಚಾರಗಳಿವೆ ಚರ್ಚೆ ಮಾಡೋಣ. ಈಗ ಸಧ್ಯಕ್ಕೆ ಶ್ರೀ ಅಶೋಕ್‌ರವರು ಪ್ರಸ್ತಾಪಿಸಿರುವಂತಹ ಸಮಸ್ಯೆ ಬಹಳ ಗಂಭೀರವಾಗಿದೆ, ಸರ್ಕಾರ ಇದನ್ನು ಗಣನೆಗೆ ತೆಗೆದುಕೊಂಡು, ಇದಕ್ಕೋಸ್ಕರ ಒಂದು ಪ್ರತ್ಯೇಕವಾದ ಪ್ಯಾಕೇಜನ್ನು ಮಾಡಲು ಆಲೋಚನೆಯನ್ನು ಮಾಡಿದೆ. 15 ದಿನಗಳ ಕಾಲ ನೀರು ಸಿಗುತ್ತಿಲ್ಲ ಎಂದು ಹೇಳಿದ್ದಾರೆ. ನಾನು ಮತ್ತೆ ವೈಯಕ್ತಿಕವಾಗಿ ಶಾಸಕರನ್ನೆಲ್ಲಾ ಕರೆದುಕೊಂಡು, ಸಿ.ಎಂ.ಸಿ. ಮುಖ್ಯಸ್ಥರನ್ನು ಕರೆಸಿ ಪ್ರತ್ಯೇಕವಾಗಿ ಚರ್ಚೆ ಮಾಡಿ ಈ ಸಮಸ್ಯೆಯನ್ನು ಬಗೆಹರಿಸುವ ಕ್ರಮವನ್ನು ಕೈಗೊಳ್ಳುತ್ತೇನೆ.

ಅಧ್ಯಕ್ಷರು: ಗಮನ ಸೆಳೆಯುವ ಸೂಚನೆ ಇಲ್ಲಿಗೆ ಮುಗಿಯಿತು. ಈಗ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ವಿಧೇಯಕ 2003 ಅನ್ನು ಪರ್ಯಾಲೋಚಿಸುವುದು ಇದರ ಬಗ್ಗೆ ಮಾನ್ಯ ಸಿ.ಬೈರೇಗೌಡರು ಮುಂದುವರೆಸಿ.

5. ಶಾಸನ ರಚನೆ

ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ವಿಧೇಯಕ, 2003 (ಮುಂದುವರಿದ ಚರ್ಚೆ) ಪರ್ಯಾಲೋಚನಾ ಪ್ರಸ್ತಾವ

+ಶ್ರೀ ಸಿ. ಬೈರೇಗೌಡ (ವೇಮಗಲ್): ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ನಾನು ಮುಖ್ಯವಾಗಿ ಕೃಷಿ ಉತ್ಪನ್ನಗಳು ಯಾವ್ಯಾವ ದೇಶಗಳಲ್ಲಿ ಎಷ್ಟೆಷ್ಟು ಸಂಸ್ಕರಣೆಯಾಗುತ್ತಿದೆ ಎಂಬುದರ ಬಗ್ಗೆ ಅಂಕಿಅಂಶಗಳನ್ನು ನೀಡುತ್ತೇನೆಂದು ಹೇಳಿದ್ದೆನು. ಅತಿ ಸಣ್ಣ ದೇಶದ ವಿಶ್ವಮಾರುಕಟ್ಟೆಯಲ್ಲಿ ಅದರ ಪಾಲು ಏನು ಎನ್ನುವುದನ್ನು ಹೇಳಿದ್ದೆನು. ಈಗ ಸಂಸ್ಕರಣೆ ಆಗಿರುವ ಬಗ್ಗೆ ಪ್ರಪಂಚದ ಕೆಲವು ಅಂಕಿಅಂಶಗಳನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ಮಲೇಶಿಯ ದೇಶದಲ್ಲಿ ಶೇಕಡ 83ರಷ್ಟು ಕೃಷಿ ಉತ್ಪನ್ನಗಳು ಅಂದರೆ ಮುಖ್ಯವಾಗಿ ತೋಟಗಾರಿಕೆ ಬೆಳೆಗಳು ಸಂಸ್ಕರಣೆಗೆ ಒಳಪಡುತ್ತವೆ. ಫಿಲಿಫೈನ್ಸ್‌ನ ದೇಶ ಶೇಕಡ 78, ಬ್ರೆಜಿಲ್ ದೇಶ ಶೇಕಡ 70, ಅಮೆರಿಕ ಮತ್ತು ಥೈಲ್ಯಾಂಡ್ ದೇಶಗಳಲ್ಲಿ ಶೇಕಡ 30 ರಷ್ಟು ಈ ಉತ್ಪನ್ನಗಳು ಸಂಸ್ಕರಣೆಗೆ ಒಳಪಡುತ್ತದೆ. ಬಹಳ ಮುಖ್ಯವಾಗಿ ಸಭೆಯ ಗಮನಕ್ಕೆ, ಸರ್ಕಾರದ ಗಮನಕ್ಕೆ ತರಬೇಕಾದಂತಹ ವಿಚಾರವೆಂದರೆ, ನೆದರ್‌ಲ್ಯಾಂಡ್ಸ್ ದೇಶದ ಜನಸಂಖ್ಯೆ 15 ದಶಲಕ್ಷ, ಎಂದರೆ ಕೇವಲ 1.50 ಕೋಟಿ. ನಮ್ಮ ಕರ್ನಾಟಕ ಜನಸಂಖ್ಯೆ ಈಗ 5 ಕೋಟಿಗೂ ಮೀರಿದೆ. ನಮ್ಮ ಕರ್ನಾಟಕದಲ್ಲಿ ಕಾಲುಭಾಗ ಇರತಕ್ಕಂತಹ ದೇಶದಲ್ಲಿ ವಿಶ್ವಮಾರುಕಟ್ಟೆಯಲ್ಲಿ ಅದರ ಪಾಲು ಏನುಎನ್ನುವುದನ್ನು ಹೇಳುವುದಕ್ಕೆ ನಾನು ಇಚ್ಛಿಪಡುತ್ತೇನೆ. ಪ್ರಪಂಚದಲ್ಲಿ ಮಾರಾಟ ಮಾಡುವಂತಹ ಅಲಂಕಾರಿಕ ಪುಷ್ಪಗಳಲ್ಲಿ ಶೇಕಡ 64 ರಷ್ಟು ಭಾಗ ನೆದರ್‌ಲ್ಯಾಂಡ್ಸ್ ದೇಶದ್ದು, ಕೋಳಿಮೊಟ್ಟೆ ಶೇಕಡ 61, ಹಂದಿಗಳು ಲೈವ್‌ಪಿಗ್ಸ್ ಶೇಕಡ 57, ಲೈವ್ ಪ್ಲಾಂಟ್ಸ್ ಅಂದರೆ ಅಲಂಕಾರಿಕ ಗಿಡಗಳು ಅದರಲ್ಲಿ ಶೇಕಡ 56, ಲಿಕ್ವಿಡ್ ಮಿಲ್ಕ್ ಹಾಲು ವಿಶ್ವ ಮಾರುಕಟ್ಟೆಯಲ್ಲಿ ಅದರ ಪಾಲು ಇರತಕ್ಕಂಥದ್ದು ಶೇಕಡ 56 ರಷ್ಟು. ಟೊಮ್ಯಾಟೋ ತರಕಾರಿ ಹಣ್ಣು ಶೇಕಡ 43. ಆಲೂಗೆಡ್ಡೆ ಶೇಕಡ 36 ರಷ್ಟು. ಒಂದು ಸಣ್ಣ ದೇಶ, ಕರ್ನಾಟಕದಲ್ಲಿ ಕಾಲುಭಾಗ ಸಹ ಇಲ್ಲದಿರುವಂತಹ ದೇಶ, ಇಷ್ಟೊಂದು ಅದ್ಭುತವಾದ ರೀತಿಯಲ್ಲಿ ಬೆಳೆಯುತ್ತಿದೆ, ಉತ್ಪಾದಿಸುತ್ತಿದೆ, ಎಂದರೆ ಅಲ್ಲಿನ ರೈತರ ಆರ್ಥಿಕ ಪರಿಸ್ಥಿತಿ ಎಷ್ಟರಮಟ್ಟಿಗೆ